

ಡಾ.ವಿನೋದ ಛೆಬ್ಬಿ

**ಸಂಗಾತಿಗಳ ವಿಭಿನ್ನ ವರ್ತನಾ ತಾತ್ಪರ್ಯಗಳಿಗೆ ಕಾರಣ ಏನೆಂದು ತಿಳಿದರೆ ನೀವು ನಂಬಲಿಕ್ಕಿಲ್ಲ!**

# 25: ಸಖ್ಯದ ನಾಲ್ಕು ಅವತಾರಗಳು

ಸಾಂಗತ್ಯದಲ್ಲಿ ಸಂಗಾತಿಗಳ ವರ್ತನಾ ತಾತ್ಪರ್ಯವು ಬಹುತೇಕ ಪ್ರಸಂಗಗಳಲ್ಲಿ ಒಂದೇ ರೀತಿಯದ್ದಾಗಿರುತ್ತದೆ ಎಂದು ಅರಿತಿದ್ದೇವೆ. ಇದರ ಬಗೆಗೆ ಹೆಚ್ಚು ತಿಳಿಯಲು ಈ ನಾಲ್ಕು ದೃಷ್ಟಾಂತಗಳನ್ನು ಮುಂದಿಟ್ಟು ನಾಲ್ಕು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಯೋಚಿಸಿ ಉತ್ತರಿಸಿ.

ದೃಷ್ಟಾಂತ 1: ದಂಪತಿ ನನ್ನೆದುರು ಕುಳಿತಿದ್ದಾರೆ. ಹೆಂಡತಿ ಮಾತಾಡುತ್ತಾಳೆ. ಇವರಿಗೆ ಎಚ್‌ಐವಿ ಇದೆಯೇ ಪರೀಕ್ಷಿಸಿ. ನಾನು ನನ್ನ ಕಿವಿಗಳನ್ನು ನಂಬದೆ ಆಕೆಯನ್ನು ಅಚ್ಚರಿಯಿಂದ ನಿರುಕಿಸುತ್ತೇನೆ. ನಿಜ, ಆಕೆಯ ಮುಖ ಮ್ಲಾನವಾಗಿದ್ದರೂ ಶಾಂತವಾಗಿದೆ. ಹಿನ್ನೆಲೆ ವಿಚಾರಿಸಿದಾಗ ಗೊತ್ತಾಗಿದ್ದು ಇದು: ಇವರು ಇಪ್ಪತ್ತು ವರ್ಷಗಳಿಂದ ವಿವಾಹಿತರು. ಮೊನ್ನೆ ಮದುವೆಗೆಂದು ದಿಲ್ಲಿಗೆ ಹೋಗಿದ್ದರು. ಅಲ್ಲಿ ಗಂಡನ ಮಾಜಿ ಪ್ರೇಯಸಿ ಬಂದಿದ್ದಳು. ಔತಣದ ನಂತರ ಗಂಡ ವಿಶ್ರಾಂತಿಗೆಂದು ಮಹಡಿಗೆ ಬಂದಾಗ ಮಾಜಿ ಪ್ರೇಯಸಿಯೂ ಅಲ್ಲೇ ಅಡ್ಡಾಗಿದ್ದಳು. ಇಬ್ಬರೂ ಮಾತಾಡುತ್ತ ಹಳೆಯ ನೆನಪಿಗೆ ಜಾರಿದರು. ನೋಡನೋಡುತ್ತ ಒಬ್ಬರ ತೆಕ್ಕೆಯಲ್ಲಿ ಇನ್ನೊಬ್ಬರಿದ್ದರು. ಎಲ್ಲ ಮುಗಿದ ಮೇಲೇ ಇವನಿಗೆ ಎಚ್ಚರ ಬಂದಿದ್ದು. ಮರುಪ್ರಯಾಣದ ಉದ್ದಕ್ಕೂ ಹೆಂಡತಿಗೆ ದ್ರೋಹ ಬಗೆದದ್ದನ್ನೇ ಯೋಚಿಸುತ್ತಿದ್ದ. ಮನೆಗೆ ಬಂದ ತಕ್ಷಣ ತಡೆಯದೆ ರಾತ್ರಿಯೇ ಹಂಚಿಕೊಂಡ. ಮರುದಿನವೇ ಇಬ್ಬರೂ ನನ್ನ ಹತ್ತಿರ ಬಂದಿದ್ದಾರೆ. ನನಗೆ ವಿಸ್ಮಯ. ಯಾಕೆ? ಇವನು ಬಚ್ಚಿಟ್ಟಿಲ್ಲ, ಇವಳು ಮೂತಿ ತಿವಿಯುತ್ತಿಲ್ಲ. ಇಬ್ಬರೂ ಒಂದೇ ದುಃಖದಲ್ಲಿ ಸಮಭಾಗಿಗಳಂತೆ ವರ್ತಿಸುತ್ತಿದ್ದಾರೆ. ಕಾರಣ ವಿಚಾರಿಸಿದಾಗ ಹೆಂಡತಿ ಒಂದು ತೊಟ್ಟು ಕಣ್ಣೀರು ಒರೆಸಿಕೊಳ್ಳುತ್ತ ಸಣ್ಣ ಸ್ವರದಲ್ಲಿ ಹೇಳಿದ್ದು: ಅವರೇ ತಪ್ಪು ಒಪ್ಪಿಕೊಂಡಿದ್ದಾರೆ. ಇನ್ನೇನು ಮಾಡಲಿಕ್ಕಾಗುತ್ತದೆ?

ಪ್ರಶ್ನೆ ಏನೆಂದರೆ, ಸಂಬಂಧವೇ ಸ್ಫೋಟವಾಗುವ ಅನಾಹುತದ ನಡುವೆಯೂ ಈತನ ಪಾರದರ್ಶಕತೆ ಹಾಗೂ ಈಕೆಯ ಸ್ವೀಕೃತಿ ಇದು ಹೇಗೆ ಸಾಧ್ಯವಾಯಿತು?

ದೃಷ್ಟಾಂತ 2: ಇದು ಪ್ರೇಮವಿವಾಹ. ಗಂಡಹೆಂಡಿರಲ್ಲಿ ಬಗೆಹರಿಯದ ಜಗಳ. ಗಂಡ ಮಾಡಿದ್ದಕ್ಕೆಲ್ಲ ಹೆಂಡತಿಯ ಅವಹೇಳನ, ಹೆಂಡತಿ ಮಾಡಿದ್ದಕ್ಕೆಲ್ಲ ಗಂಡನ ಗೊಣಗಾಟ. ಒಂದು ದಿನ ಗಂಡ ಏನೋ ನಿರ್ಧರಿಸಿದ. ಹೆಂಡತಿಯನ್ನು ಕೂಡಿಸಿಕೊಂಡು ಕೇಳಿದ. ನೋಡು, ನಿನಗೇನು ಬೇಕೆಂದು ಹೇಳು, ಅದರಂತೆ ನಡೆದುಕೊಳ್ಳುತ್ತೇನೆ. ನನಗೆ ಹೇಗೆ ಬೇಕು ಎಂದು ನಾನು ಹೇಳುತ್ತೇನೆ. ಆ ಪ್ರಕಾರ ನೀನು ನಡೆದುಕೋ. ಅಂದರೆ ನಮ್ಮಲ್ಲಿ ಜಗಳವೇ ಬರಲಾರದು. ಹೆಂಡತಿ ಉತ್ಸಾಹದಿಂದ ಒಪ್ಪಿ ತನ್ನ ಪಟ್ಟಿ ಸಲ್ಲಿಸಿದಳು. ನನ್ನಿಂದ ಕೆಲಸ ಎಷ್ಟೇ ಹಾಳಾದರೂ ನೀವು ಬಯ್ಯಕೂಡದು. ನಾನು ಮಾಡಿದ್ದೆಲ್ಲ ನೀವು ಮೆಚ್ಚಬೇಕು... ಇತ್ಯಾದಿ. ಗಂಡ ಒಪ್ಪಿದ. ನಂತರ ಅವನು, ಈಗ ನನ್ನ ಇಷ್ಟಗಳು ಏನೆಂದರೆ... ಎಂದು ಬಾಯಿ ತೆರೆದಾಗ, ಹೆಂಡತಿ ಹೇಳಿದಳು. ಮೊದಲು ನನ್ನ ಇಷ್ಟಗಳನ್ನು ಪೂರೈಸಿ. ಆಮೇಲೆ ನಿಮ್ಮಿಷ್ಟಕ್ಕೆ ಬರೋಣ. ಈ ಒಪ್ಪಂದ ಬೇಗ ಮುಗ್ಗರಿಸಿತು. ಯಾಕೆ? ಗಂಡ ಹತ್ತು ಕೆಲಸ ಸರಿಮಾಡಿ, ಹನ್ನೊಂದನೆಯದನ್ನು ಸರಿಮಾಡದಿರುವಾಗ, ಅವಳ ಬೇಡಿಕೆ, ತಕರಾರು ಮುಂದುವರಿಯಿತು. ಹಾಗಾಗಿ ಗಂಡನಿಗೆ ತನ್ನಿಷ್ಟ ಹೇಳಿಕೊಳ್ಳಲು ಅವಕಾಶವೇ ಸಿಗಲಿಲ್ಲ!

ಪ್ರಶ್ನೆ ಏನೆಂದರೆ, ಆಕೆಗೆ ತನಗೇನು ಬೇಕು ಎನ್ನುವುದು ಗೊತ್ತಾದರೂ ತನಗೆ ಯಾವಾಗ ಸಾಕು ಎಂದು ಗೊತ್ತಾಗದಿರಲು ಕಾರಣ ಏನಿರಬಹುದು?

ದೃಷ್ಟಾಂತ 3: ನಾನೊಮ್ಮೆ ಬಂಧುಗಳ ಮನೆಗೆ ಊಟಕ್ಕೆ ಹೋಗಿದ್ದೆ. ಮನೆಯಾಕೆ ಮಾಡಿದ ಅಡುಗೆಯನ್ನು ಸವಿಯುತ್ತ, ವೈನಿ, ನೀವು ಬಹಳ ರುಚಿಯಾಗಿ ಅಡಿಗೆ ಮಾಡುತ್ತೀರಿ! ಎಂದೆ. ಆಕೆಯ ಪ್ರತಿಕ್ರಿಯೆ ಏನಿರಬಹುದು? ಥ್ಯಾಂಕ್ಸ್ ಎಂದೇ? ಇಲ್ಲ. ಏನೋ ಒಂದು ಮಾಡಿದ್ದೇನೆ ಎಂದೇ? ಇಲ್ಲ. ನೀವು ಸುಮ್ಮನೆ ಹೊಗಳುತ್ತೀರಿ ಎಂದೇ? ಖಂಡಿತವಾಗಿಯೂ ಅಲ್ಲ. ಹಾಗಾದರೆ ಏನೆಂದರು? ಏನೂ ಅನ್ನಲಿಲ್ಲ. ಸುಮ್ಮನೇ ಅತ್ತರು. ಆಮೇಲೆ ಒಂದೇ ಒಂದು ಮಾತು ಹೇಳಿದರು. ಹದಿನಾರು ವರ್ಷದಲ್ಲಿ ಒಂದು ಸಲವಾದರೂ ನಮ್ಮವರು ಇಂಥ ಮಾತು ಹೇಳಿಲ್ಲ. ನಾನು ವಿಧಿಯಿಲ್ಲದೆ ಆತಿಥೇಯರ ಕಡೆಗೆ ನೋಡಿದಾಗ ಆತ ಎಂದಿದ್ದು: ಚೆನ್ನಾಗಿ ಮಾಡಿದರೆ ಚೆನ್ನಾಗಿದೆ ಎಂದು ಹೇಳುವ ಅಗತ್ಯವೇನಿರುತ್ತದೆ? ಚೆನ್ನಾಗಿಲ್ಲದಿದ್ದರೆ ಇಲ್ಲ ಎಂದು ಮಾತ್ರ ಹೇಳಬಹುದಷ್ಟೆ. ಮುಖಸ್ತುತಿ ಮಾಡುವುದು ನನ್ನ ಜಾಯಮಾನವಲ್ಲ. ಮೆಚ್ಚುಗೆ ವ್ಯಕ್ತಪಡಿಸಿದರೆ ಏನು ಅನಾಹುತ ಆಗಬಹುದು ಎಂಬ ಮಾತು ತುದಿನಾಲಿಗೆಯ ತನಕ ಬಂದಿದ್ದು ತಡೆದುಕೊಂಡೆ. ನಂತರ ಗೊತ್ತಾಗಿದ್ದು ಇದು: ಈತ ಯಾವುದಕ್ಕೂ ಹೆಂಡತಿಯ ಬಗೆಗೆ ಮೆಚ್ಚುಗೆ ತೋರಿಸುವುದಿಲ್ಲ. ತಪ್ಪು ಮಾಡಿದರೆ ಮಾತ್ರ ಮುಖಮೂತಿ ನೋಡದೆ ಖಂಡಿಸುತ್ತಾರೆ. ಯಾಕೆ? ಆಕೆಗೆ ಸರಿಯಾಗಿ ಮನೆಗೆಲಸ ಬರುವುದಿಲ್ಲ. ಕಾರ್ಯವೈಖರಿಯ ಬಗೆಗೆ ಮರುಮಾಹಿತಿ ಕೊಡದಿದ್ದಲ್ಲಿ ಯಾರಾದರೂ ಸುಧಾರಣೆ ತಂದುಕೊಳ್ಳಲು ಹೇಗೆ ಸಾಧ್ಯ ಎನ್ನುವುದು ಆತನಿಗೆ ಇನ್ನೂ ಅರ್ಥವಾಗಿಲ್ಲ.

ಪ್ರಶ್ನೆ ಏನೆಂದರೆ, ಟೀಕಿಸುವಾಗ ಹತ್ತಿರವಾಗುವವನು ಮೆಚ್ಚುವಾಗ ದೂರವಿರುವುದು ಹೇಗೆ ಸಾಧ್ಯವಾಯಿತು?

ದೃಷ್ಟಾಂತ 4: ಈ ಕಾಲೇಜು ಪ್ರೇಮಿಗಳ ನಡುವೆ ಶರೀರ ಸಂಬಂಧ ನಡೆದ ಮಾರನೆಯ ದಿನ ಹುಡುಗ ಬೇಡಿಕೆ ಮುಂದಿಟ್ಟ. ಅವನ ಮೊದಲ ಕರಾರು: ನಾನು ನಿನ್ನನ್ನು ಯಾವೊತ್ತೂ ಕೈಬಿಡುವುದಿಲ್ಲ. ಆದರೆ ನೀನು ನನ್ನನ್ನು ಮೋಸ ಮಾಡುವುದಿಲ್ಲ ಎಂಬುದಕ್ಕೆ ಏನು ಖಾತರಿ? ಅದಕ್ಕಾಗಿ ನೀನು ಯಾವ ಗಂಡು ಸಹಪಾಠಿಗಳ ಜೊತೆಗೂ ಮಾತಾಡಕೂಡದು! ಸರಿ, ಒಪ್ಪಿಕೊಂಡಳು. ಎರಡನೆಯ ಕರಾರು: ನಾನು ನಿನ್ನನ್ನು ಬಿಟ್ಟು ಯಾರನ್ನೂ ಬಯಸುವುದಿಲ್ಲ. ಹಾಗಾಗಿ ನನಗೆ ಬೇಕಾದಾಗಲೆಲ್ಲ ನೀನು ಶರೀರ ಸುಖ ಕೊಡಬೇಕು. ಸರಿ, ಅದಕ್ಕೂ ಒಪ್ಪಿದಳು. ಸ್ವಲ್ಪ ದಿನಗಳ ನಂತರ ಇವನ ಫೋನ್ ಅವಳು ಎತ್ತಿದಾಗ ಅವಳ ನಗುವಿನೊಂದಿಗೆ ಕೆಲವು ಗಂಡು ಸ್ವರಗಳೂ ನಗುವುದನ್ನು ಕೇಳಿಸಿಕೊಂಡು ಇವಳನ್ನು ತಾನಿರುವ ಜಾಗಕ್ಕೆ ತಕ್ಷಣ ಬರಬೇಕೆಂದು ಆಜ್ಞೆ ಮಾಡಿದ. ಪರೀಕ್ಷೆಗೆ ಅತಿಮುಖ್ಯವಾದ ಪಾಠ ಬಿಟ್ಟು ಧಾವಿಸಿ ಬಂದಾಗ ಅವಳಿಗೆ ಮೊದಲು ಸಿಕ್ಕಿದ್ದು ಕಪಾಳ ಮೋಕ್ಷ. ನಂತರ ನಂಬಿಕೆಗೆ ದ್ರೋಹ ಮಾಡಿದಳೆಂದು ಒಂದು ತಾಸು ಚುಚ್ಚು ಮಾತು. ನಂತರ ಅವಳು ತನ್ನ ನಿಷ್ಠೆಯನ್ನು ತೋರ್ಪಡಿಸಲು ಶರೀರಸುಖದ ಬೇಡಿಕೆ. ಅವಳು ಅನುಮಾನಿಸಿದಾಗ ಇನ್ನೊಂದು ಕಪಾಳ ಮೋಕ್ಷ. ಕೊನೆಗೂ ಬಯಲಲ್ಲೇ ಅವನಿಗೆ ಮೈಯೊಪ್ಪಿಸಿ ಮುಗಿಸಿ ಪಾರಾದಳು. ಅವನನ್ನು ಬಿಡಲು ನಿರ್ಧರಿಸಿ ಸಂಪರ್ಕ ಕಡಿದಾಗ ಆತ ಕರೆಯ ಮೇಲೆ ಕರೆಮಾಡಿ ಸಂದೇಶದ ಮೇಲೆ ಸಂದೇಶ ಕಳಿಸಿ, ನೀನಿಲ್ಲದೆ ನಾನಿರಲಾರೆ; ನೀನು ಉತ್ತರಿಸದಿದ್ದರೆ ನನ್ನ ಸಾವಿಗೆ ನೀನೇ ಕಾರಣ ಎಂದು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ! (ನೆನಪಿಡಿ: ಈತ ಖಂಡಿತ ವಿಕೃತಕಾಮಿ ಅಲ್ಲ!) ವಿಪರ್ಯಾಸವೆಂದರೆ ಸ್ವಲ್ಪ ದಿನಗಳ ನಂತರ ಅವಳೇ ಅವನನ್ನು ಸಂಪರ್ಕಿಸಿ ನಾ ನಿನ್ನ ಬಿಡಲಾರೆ ಎಂದಳು! ಅಷ್ಟೊತ್ತಿಗೆ ಅವನು ಇನ್ನೊಬ್ಬಳನ್ನು ಹುಡುಕಿಕೊಂಡಿದ್ದ!

ಪ್ರಶ್ನೆ ಏನೆಂದರೆ, ನಂಬಿದ ಸಂಗಾತಿಯನ್ನು ನಂಬದೆ ಹಿಂಸಿಸುವ, ನೀನಿಲ್ಲದೆ ನಾನಿಲ್ಲ ಎನ್ನುವವರು ಇನ್ನೊಬ್ಬರನ್ನು ಹುಡುಕಿಕೊಳ್ಳುವ ವರ್ತನಾ ತಾತ್ಪರ್ಯ, ಹಾಗೂ ತನ್ನನ್ನು ಹಿಂಸಿಸುವವನಿಗೇ ಶರಣಾಗುವ ಅವಲಂಬಿತ ವ್ಯಕ್ತಿತ್ವ ವೈಪರೀತ್ಯ (dependent personality disorder) ಹೇಗೆ ಹುಟ್ಟಿತು?

ಈ ನಾಲ್ಕೂ ಪ್ರಶ್ನೆಗಳಿಗೆ ಉತ್ತರ ಹುಡುಕಹೊರಟರೆ ನೀವು ದಂಗಾಗುವ ವಿಷಯ ಇಲ್ಲಿದೆ: ಎಲ್ಲರ ಭಿನ್ನ ವರ್ತನಾ ತಾತ್ಪರ್ಯಗಳಿಗೆ ಕಾರಣ ಒಂದೇ ಒಂದು ಎಂದರೆ ನಂಬುತ್ತೀರಾ?

ಅದೇನೆಂದು ಮುಂದಿನ ಸಲ ತಿಳಿಯೋಣವಂತೆ!

**ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org**